# 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ. 13/2025

ದಿನಾಂಕ – 12.05.2026

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | – | ಕಿರಣ್ ಕುಮಾರ್ | ಪ್ರಾ.ಸಾ. | – | 07 |
| ತಂದೆಯ ಹೆಸರು | – | ನಾಗೇಂದ್ರಪ್ಪ | ಚಾ.ಸಾ. | – | 08 |
| ವಯಸ್ಸು | – | 29 ವರ್ಷ | | | |
| ಉದ್ಯೋಗ | – | ಚಾಲಕ | | | |
| ವಾಸ ಸ್ಥಳ | – | ಚಳ್ಳಕೆರೆ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಸರ್ಕಾರಿ ಅಭಿಯೋಜಕರಿಂದ –**

ನನಗೆ ಈ ಕೇಸಿನ ಚಾಸಾ–1 ಇವರು ಗೊತ್ತಿರುವುದಿಲ್ಲ. ಆದರೆ ಚಾಸಾ–7 ಇವರು ನನ್ನ ಸ್ನೇಹಿತನಿರುತ್ತಾನೆ.

ಈಗ ನೋಡುತ್ತಿರುವ ನಿಪಿ–2 ಮತ್ತು 3 ಎಂದು ಗುರುತಿಸಿದ ದಾಖಲೆಯಲ್ಲಿಯ ಸಹಿ ನನ್ನವೇ ಇರುತ್ತವೆ. ಸಾಕ್ಷಿ ಗುರುತಿಸಿದ ಸಹಿಗಳನ್ನು ಈಗ ಕ್ರಮವಾಗಿ ನಿಪಿ–2(ಸಿ) ಮತ್ತು ನಿಪಿ–3(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ನಾನು ಈಗ್ಗೆ ಅಂದಾಜು ಒಂದು ವರ್ಷದ ಹಿಂದೆ ಒಂದು ದಿನ ಠಾಣೆಯಲ್ಲಿ ಮಾಡಿರುತ್ತೇನೆ. ಪೋಲೀಸರು ನನ್ನ ಸಮಕ್ಷಮ ಯಾವುದೇ ಸ್ಥಳದ ಸ್ಥಿತಿಗತಿಯ ಬಗ್ಗೆ ಪಂಚನಾಮೆ ಮಾಡಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಆ ಸ್ಥಳದಿಂದ ಜಪ್ತುಗೊಳಿಸಿರುವುದಿಲ್ಲ. ಈಗ ನೋಡುತ್ತಿರುವ ನೋಟೀಸ್ ಮತ್ತು ಪಂಚನಾಮೆಯಲ್ಲಿಯ ಸಹಿ ನನ್ನವೇ ಇರುತ್ತವೆ.

ನಿಪಿ–4 ಮತ್ತು 5 ಎಂದು ಗುರುತಿಸಿದ ಫೋಟೋದಲ್ಲಿ ನಾನು ಮತ್ತು ಚಾಸಾ–7 ಹಾಗೂ ಪೋಲೀಸರು ಮತ್ತು ಇತರರು ಕಾಣುತ್ತೇವೆ. ಸದರಿ ಫೋಟೋಗಳನ್ನು ಪೋಲೀಸರು ಏಕೆ ತೆಗೆಸಿದರೆಂದು ನನಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯವನ್ನು ನೀಡಿದ್ದು, ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಮಾನ್ಯ ಸರ್ಕಾರಿ ಅಭಿಯೋಜಕರು ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**– ಪಾಟೀ ಸವಾಲು – ಮಾನ್ಯ ಸರ್ಕಾರಿ ಅಭಿಯೋಜಕರಿಂದ –**

ದಿಃ 14.11.2024 ರಂದು ಚಳ್ಳಕೆರೆ ಪೋಲೀಸರು ನನ್ನನ್ನು ಮತ್ತು ಚಾಸಾ–7 ಇವರನ್ನು ಚಳ್ಳಕೆರೆ ಪಟ್ಟಣದ ಬಳ್ಳಾರಿ ರಸ್ತೆಯಲ್ಲಿರುವ ಇಂಜಿನಿಯರಿಂಗ್ ಕಾಲೇಜು ಬಳಿ ಇರುವ ಕೆರೆಕಟ್ಟೆಯ ಬಳಿ ಕರೆಯಿಸಿ, ಸದರಿ ಸ್ಥಳದಲ್ಲಿ ಚಾಸಾ–1 ಹಾಜರಿದ್ದು, ಆತನು ಘಟನಾ ಸ್ಥಳವನ್ನು ತೋರಿಸುತ್ತಿದ್ದು, ಆ ಬಗ್ಗೆ ಪಂಚನಾಮೆ ಮಾಡುವುದು ಇದ್ದು, ಆ ಕಾರಣ ನೀವು ಪಂಚರೆಂದು ಕರ್ತವ್ಯ ನಿರ್ವಹಿಸುವಂತೆ ಕೇಳಿದ್ದು, ಅದಕ್ಕೆ ನೀವು ಒಪ್ಪಿದ್ದು, ಆಗ ಚಾಸಾ–1 ಇವರು ಘಟನಾ ಸ್ಥಳವನ್ನು ತೋರಿಸಿದ್ದು, ಆಗ ಪೋಲೀಸರು ಆ ಸ್ಥಳದ ಸ್ಥಿತಿಗತಿಯ ಬಗ್ಗೆ ನಮ್ಮ ಸಮಕ್ಷಮ ಮಧ್ಯಾಹ್ನ 2.30 ರಿಂದ 3.45 ರವರೆಗೆ ನಿಪಿ–2 ರಂತೆ ಪಂಚನಾಮೆ ಮಾಡಿ ಅದನ್ನು ಬರೆದುಕೊಂಡು ಆ ವೇಳೆಗೆ ಸ್ಥಳದಿಂದ ಈಗಾಗಲೇ ಗುರುತಿಸಲಾದ ಎಂಒ–1 ರಿಂದ 7 ವಸ್ತುಗಳನ್ನು ಮುಂದಿನ ಕ್ರಮಕ್ಕೆ ಜಪ್ತುಗೊಳಿಸಿಕೊಂಡು ಮತ್ತು ಆ ವೇಳೆಗೆ ನಿಪಿ–3 ನ್ನು ತಯಾರಿಸಿ ಅದಕ್ಕೆ ನಮ್ಮಗಳ ಸಹಿ ಪಡೆದಿರುವರು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಪೋಲೀಸರು ನಿಪಿ–4 ಮತ್ತು 5 ಎಂದು ಗುರುತಿಸಿದ ಪೋಟೋಗಳನ್ನು ಕೂಡ ತೆಗೆಸಿರುವರು ಎಂದರೆ ಸರಿಯಲ್ಲ.

ಪೋಲೀಸರು ನನ್ನ ಮತ್ತು ಚಾಸಾ–7 ಇವರ ಸಮಕ್ಷಮ ನಿಪಿ–2 ರಂತೆ ಪಂಚನಾಮೆ ಮಾಡಿ, ನಿಪಿ–3 ರಂತೆ ಕಚ್ಚಾ ನಕಾಶೆ ತಯಾರಿಸಿ ನಿಪಿ–4 ಮತ್ತು 5 ಎಂದು ಗುರುತಿಸಿದ ಪೋಟೋಗಳನ್ನು ನಿಪಿ–2 ಎಂದು ಗುರುತಿಸಿದ ಪಂಚನಾಮೆ ಮಾಡಿದಾಗ ತೆಗೆಸಿದ್ದು ಮತ್ತು ಅದರ ಬಗ್ಗೆ ನನಗೆ ಎಲ್ಲಾ ಮಾಹಿತಿ ಇದ್ದು, ಆದರೂ ಕೂಡ ಈಗ ಆರೋಪಿಗೆ ಸಹಾಯ ಮಾಡಲು ನನಗೆ ಏನೂ ಗೊತ್ತಿಲ್ಲವೆಂದು ನಾನು ಸುಳ್ಳು ಹೇಳುತ್ತಿರುವೆನು ಎಂದರೆ ಸರಿಯಲ್ಲ.

**– ಪಾಟೀ ಸವಾಲು – ಆರೋಪಿಯ ಪರ – ಶ್ರೀಮತಿ ಕೆ.ಎಸ್.ಆರ್. ವಕೀಲರಿಂದ –**

ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿತ್ರದುರ್ಗ.